# ನಾವಿರೋದೇ ಹೀಗೆ...!

**ಅರವತ್ತೊಂದು ವರ್ಷಗಳ ಹಿಂದೆ ತೆಗೆದ ಭಾವಚಿತ್ರ ನೆನಪಿನ ಬುತ್ತಿಯನ್ನೇ ಹೊತ್ತಿದೆ. ಈಗ ಈ ಚಿತ್ರದಲ್ಲಿರುವ ನಾವೇ ಮೂರು ಮಂದಿ ಅದೇ ರೀತಿ ನಿಂತು ಫೋಟೊ ತೆಗೆಸಿಕೊಂಡಿದ್ದು ಹಳೆಯ ನೆನಪಿಗೆ ಹೊಸ ಫ್ರೇಮ್ ಹಾಕಿದಂತಾಗಿದೆ.**





ಚಿತ್ರದಲ್ಲಿರುವವರು: ರಾಜಾರಾಮ, ಪ್ರಭಾಶಂಕರ ಹಾಗೂ ಜಯಪ್ರಕಾಶ

**■ ಪ್ರಭಾಶಂಕರ ಜಿ. ಹೆಗಡೆ**

ಬಾಲ್ಯದ ನೆನಪು, ಹಳೆಯ ಫೋಟೊ ನೋಡುವಾಗ ನೀಡುವ ಖುಷಿ, ಎಂದೋ ಪ್ರವಾಸ ಹೋದದ್ದನ್ನು ನೆನಪಿಸಿಕೊಂಡಾಗಿನ ಕ್ಷಣ, ಮನೆಯಲ್ಲಿ, ಶಾಲಾ ಕಾಲೇಜುಗಳಲ್ಲಿ ಆದ ವಿಶೇಷ ಘಟನೆಗಳನ್ನು ಮೆಲುಕು ಹಾಕುವಾಗ ಸಿಗುವ ತೃಪ್ತಿ ಎಂದೂ ಮರೆಯುವಂಥದ್ದಲ್ಲ.

ನಮ್ಮ ಮನೆಯಲ್ಲಿ ಸಿಕ್ಕಿದ ಹಳೆಯ ಭಾವಚಿತ್ರ ನೆನಪುಗಳ ಬುತ್ತಿಯನ್ನು ಮೊಗೆಮೊಗೆದು ಕೊಟ್ಟಂತಿದೆ. ಭಾವಚಿತ್ರಗಳು ಹಳೆಯದಾದಷ್ಟೂ ಅವುಗಳ ಮೌಲ್ಯ ಜಾಸ್ತಿಯಾಗುವುದು ಇದೇ ಕಾರಣಕ್ಕೆ ಅಲ್ಲವೇ? ನಮ್ಮ ಜೀವತಾವಧಿಯ ಅರವತ್ತೊಂದು ವರ್ಷಗಳ ಅಂತರದಲ್ಲಿ ತೆಗೆದ ಎರಡು ಭಾವಚಿತ್ರಗಳು ಸಿಕ್ಕಿದ್ದು ಅವುಗಳನ್ನು ನೋಡುತ್ತಾ ಆನಂದಿಸುವುದಕ್ಕೆ ಸಮನಾದ ತೃಪ್ತಿ ಯಾವುದಿದೆ ಹೇಳಿ?

ಎಪ್ಪತ್ತು ವರ್ಷಗಳಷ್ಟು ಹಿಂದೆ ನನ್ನ ಸುಬ್ರಾಯಣ್ಣ ಹವ್ಯಾಸಿ ಫೋಟೋಗ್ರಾಫರ್ ಆಗಿದ್ದರು. ಕಪ್ಪು ಬಿಳುಪಿನ ಯುಗವಾಗಿತ್ತದು. ಆ ಕಾಲದಲ್ಲೇ ಮನೆ ಮಂದಿಯ, ಸಂಬಂಧಿಕರ ಅನೇಕಾನೇಕ ಭಾವಚಿತ್ರಗಳನ್ನು ತೆಗೆಯುತ್ತಿದ್ದು, ಅವುಗಳಲ್ಲಿ ಕೆಲವು ಈಗಲೂ ಸುಸ್ಥಿತಿಯಲ್ಲಿದ್ದು ನೋಡುಗರನ್ನು ಹಲವಾರು ದಶಕಗಳ ಹಿಂದಕ್ಕೆ ಕರೆದುಕೊಂಡು ಹೋಗಿ ಪುಳಕವನ್ನುಂಟು ಮಾಡುತ್ತಿವೆ.

ಸುಬ್ರಾಯಣ್ಣನ ಮಗ ರಾಜಾರಾಮ, ರಾಮಚಂದ್ರಣ್ಣನ ಮಗ ಜಯಪ್ರಕಾಶ ಮತ್ತು ನಾನು ಹೆಚ್ಚು ಕಡಿಮೆ ಸಮವಯಸ್ಕರೇ, ಇಂಡಿಗೆ ಸುಮಾರು 61 ವರ್ಷಗಳ ಹಿಂದೆ ನಾವು ಮೂವರೂ ಗಂಡು ಮಕ್ಕಳ ಬ್ರಹ್ಮೋಪದೇಶ (ಉಪನಯನ) ಕಾರ್ಯಕ್ರಮ ನಮ್ಮ ತಂದೆಯವರ ಹಿರಿವನದಲ್ಲಿ ಒಟ್ಟಿಗೇ ಏರ್ಪಾಡು ಮಾಡಲಾಗಿತ್ತು. ಆ ಸಂದರ್ಭದಲ್ಲಿ ಸುಬ್ರಾಯಣ್ಣ ನಾವು ಮೂವರು ಇರುವ ಒಂದು ಗ್ರೂಪ್ ಫೋಟೊ ತೆಗೆದಿದ್ದ. ಅದರ ಒಂದು ಪ್ರತಿ ಈಗ ಕೆಲದಿನಗಳ ಹಿಂದೆ ಅಕ್ಕ ತ್ರಿವೇಣಿಯ ಮನೆಯಲ್ಲಿ ಸಿಕ್ಕಿತ್ತು. ಕಪ್ಪು ಬಿಳುಪು ಫೋಟೊ ಸಾಕಷ್ಟು ಸುಸ್ಥಿತಿಯಲ್ಲೇ ಇತ್ತು. ಅದನ್ನು ನೋಡುತ್ತಿರಲಾಗಿ ಅಷ್ಟು ಹಿಂದಿನ ಕಾಲದ ಸವಿನೆನಪಿನ ಸುರುಳಿಯೇ ಬಿಚ್ಚಿಕೊಂಡಂತಾಗಿತ್ತು. ಆ ಫೋಟೋದಲ್ಲಿದ್ದ ನಾವು ಮೂವರಿಗೂ ಅದೊಂದು ಅಮೂಲ್ಯ ನಿಧಿಯಂತೆ ಭಾಸವಾಗುತ್ತಿತ್ತು. ಆ ಭಾವಚಿತ್ರದ ಪ್ರತಿ ಮಾಡಿಸಿ, ದೊಡ್ಡದಾಗಿಸಿ ಇಟ್ಟುಕೊಂಡ ನನಗೆ ಏನೋ ಧನ್ಯತಾ ಭಾವನೆಯುಂಟಾಗಿತ್ತು.

ಈಗ 72ಕ್ಕಿಂತ ಹೆಚ್ಚಿನ ವಯಸ್ಸಿನ ಹಿರಿಯ ನಾಗರಿಕರಾದ ನಾವು ಬೇರೆ ಬೇರೆ ವೃತ್ತಿಗಳನ್ನು ಹಿಡಿದು ನಿವೃತ್ತರಾಗಿದ್ದು ಆಗಾಗ ಭೆಟ್ಟಿಯಾಗುತ್ತಿರುತ್ತೇವೆ.

ಇತ್ತೀಚೆಗೆ ಕುಟುಂಬದ ಸಮಾರಂಭವೊಂದರಲ್ಲಿ ನಾವು ಮೂವರೂ ಹಾಜರಾಗಿದ್ದೆವು. ಈ ಸಂದರ್ಭದಲ್ಲಿ ಹಾಗೆಯೇ ಹೋಗಲು ಬಿಡದೇ ಹಿಂದಿನ ಆರ್ಡರ್‌ನಲ್ಲಿಯೇ ನಿಂತು ಕಲರ್ ಫೋಟೊ ತೆಗೆಸಿಕೊಂಡೆವು. 61 ವರ್ಷಗಳಷ್ಟು ಸುದೀರ್ಘ ಸಮಯದ ಅಂತರದಲ್ಲಿ ತೆಗೆದ ಈ ಎರಡೂ ಗ್ರೂಪ್ ಫೋಟೋಗಳನ್ನು ದೊಡ್ಡದು ಮಾಡಿಸಿ ಅಪ್ತೇಷ್ಟರಿಗೆ ತೋರಿಸುವುದೇ ನಮಗೊಂದು ಸಡಗರದ ಸಂಗತಿ. ದೇವರ ದಯದಿಂದ ಯಾವುದೇ ಗಂಭೀರ ಕಾಯಿಲೆಗೆ ತುತ್ತಾಗದೇ 72 ವಸಂತಗಳನ್ನು ಪೂರೈಸಿ ಈಗಲೂ ಉತ್ಸಾಹದಿಂದ ಬಾಳಿನ ಸಂಜೆಯ ಸೊಬಗನ್ನು ಆನಂದಿಸುತ್ತಿರುವ ನಮ್ಮ ಸೌಭಾಗ್ಯ ಸವಿನೆನಪಿನ ಸಾಲಿನಲ್ಲಿ ಸೇರಿದೆ. ■